ಅದು ಮಾಡಲಿಕ್ಕಾಗುವುದಿಲ್ಲ. ಈ ಒಂದು ಇಲಾಖೆ ಸರ್ವಸನ್ನದ್ಧವಾಗಿರಬೇಕು. ಅದಕ್ಕೆ ಬೇಕಾದ ನಿರ್ದೇಶಕರು ಇರಬೇಕಾಗುತ್ತದೆ. ಕಳೆದ ಎರಡು ವರ್ಷಗಳಿಂದ ಆ ಇಲಾಖೆಗೆ ನಿರ್ದೇಶಕರಿಲ್ಲದೆ ಇರುವುದರಿಂದ ಪ್ರಗತಿ ಕುಂಠಿತವಾಗಿದೆ. ಸುಮಾರು ಗ್ರಾಮಾಂತರ...

ಅಧ್ಯಕ್ಷರು : ಕ್ವೊಶ್ಚನ್ ಕ್ವೊಶ್ಚನ್.

ಶ್ರೀ ಪಿ. ಬಸವರಾಜು : ಅಧ್ಯಕ್ಷರೆ, ಆದ್ದರಿಂದ ಆ ಇಲಾಖೆಗೆ ಯಾವಾಗ ನಿರ್ದೇಶಕರನ್ನು ನೇಮಕ ಮಾಡುತ್ತೀರಿ? ಮತ್ತು ಏನು ಕೊರತೆ ಬಂದಿರುವ ಸಿಬ್ಬಂದಿ ವರ್ಗ ಇದೆ, ಅದರ ನೇಮಕಾತಿ ಮಾಡಲಿಕ್ಕೆ ಯಾವ ಕ್ರಮ ತೆಗೆದುಕೊಳ್ಳುತ್ತೀರೆಂದು ತಮ್ಮ ಮುಖಾಂತರ ಸರ್ಕಾರವನ್ನು ಕೇಳುತ್ತಿದ್ದೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ (ಶಿಕ್ಷಣ ಸಚಿವರ ಪರವಾಗಿ): 1986ನೇ ಇಸವಿಯಲ್ಲಿ ನಿರ್ದೇಶಕರನ್ನು ಜೇಷ್ಯತಾ ಆಧಾರದ ಮೇಲೆ ಸರ್ಕಾರ ನೇಮಕ ಮಾಡಿತ್ತು. ಆದರೇ ಅದರಲ್ಲಿ ದೋಷ ಇತ್ತೆಂದು ನ್ಯಾಯಾಲಯಕ್ಕೆ ಹೋಗಿದ್ದ ಪರಿಣಾಮವಾಗಿ 1990 ರಲ್ಲಿ ನ್ಯಾಯಾಲಯ ಒಂದು ಆಜ್ಞೆಯನ್ನು ಕೊಡುವುದರ ಜೊತೆಗೆ ಕೆಲವು ಗೈಡ್ ಲೈನ್ಸ್ ಕೂಡ ಕೊಟ್ಟಿದೆ. ಆ ಹಿನ್ನಲೆಯಲ್ಲಿ ಸರ್ಕಾರ ಈಗಾಗಲೇ ಕಾರ್ಯಕ್ರಮ ತೆಗೆದುಕೊಂಡಿದೆ. ಕೂಡಲೇ ಜೇಷ್ಯತಾ ಪಟ್ಟಿಯನ್ನು ಪ್ರಕಟಣೆ ಮಾಡುವ ಮೂಲಕ ಇಲಾಖೆಯಿಂದ ಭಡ್ತಿ ಕೊಟ್ಟು ನಿರ್ದೇಶಕರನ್ನು ನೇಮಕ ಮಾಡತಕ್ಕಂಥ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಮತ್ತೊಂದು ಮಾತನ್ನು ಹೇಳಬಯಸುತ್ತೇನೆ. ಸಿಬ್ಬಂದಿ ಕೊರತೆ ನೀಗಲು 1810 ಜನ ಬೇಕು ಅನ್ನತಕ್ಕಂಥಾದ್ದನ್ನು ಇಲಾಖೆಯವರು ಈಗಾಗಲೇ ಪ್ರಸ್ತಾವನೆಯನ್ನು ಕಳುಹಿಸಿದ್ದಾರೆ. ಆರ್ಥಿಕ ನಿರ್ಬಂಧದ ಪರಿಸ್ಥಿತಿಯಿಂದಾಗಿ ಇವರಿಗೆ ಮಂಜೂರಾತಿ ಸಿಗಲಿಲ್ಲ. ಈಗ ಇಲಾಖೆಯವರು ಅರ್ಥ ಇಲಾಖೆಯವರ ಮೇಲೆ ಇದರ ಅಗತ್ಯತೆಯನ್ನು ಒತ್ತಿ ಹೇಳುವ ಮೂಲಕ ಅದರ ಮಂಜೂರಾತಿಯನ್ನು ಶೀರ್ಘದಲ್ಲೇ ಪಡೆಯುವವರಿದ್ದಾರೆ. ನಂತರ ಎಲ್ಲಾ ಖಾಲಿ ಇರತಕ್ಕಂಥ ಸ್ಥಾನಗಳನ್ನು ಭರ್ತಿ ಮಾಡಿ ಲೈಬ್ರರಿಯ ಉಪಯೋಗ ಎಲ್ಲರಿಗೂ ಸಿಗುವಂಥ ರೀತಿಯಲ್ಲಿ ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಬಯಸುತ್ತೇನೆ.

ಅಧ್ಯಕ್ಷರು : ಶ್ರೀ ಎನ್. ತಮ್ಮಣ್ಣ ಅವರ ಪ್ರಶ್ನೆ ಹೆಲ್ಡ್ ಓವರ್ ಆಗಿದೆ. ಇದನ್ನು 27ನೇ ತಾರೀಖು ಹಾಕುತ್ತೇನೆ.

ಚಿತ್ತಾಪುರ ತಾಲ್ಲೂಕಿನ ಶಾಲೆಗಳಲ್ಲಿ ಶಿಕ್ಷಕರಿಲ್ಲದಿರುವುದು

3348 : ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಚಿತ್ತಾಪುರ ತಾಲ್ಲೂಕಿನಲ್ಲಿ ಪ್ರಾಥಮಿಕ ಶಾಲೆ, ಹೈಸ್ಕೂಲ್ ಮತ್ತು ಕಾಲೇಜುಗಳಲ್ಲಿ ಉಪನ್ಯಾಸಕರು ಸಾಕಷ್ಟು ಸಂಖ್ಯೆಯಲ್ಲಿ ಇಲ್ಲದಿರುವುದು ಸರ್ಕಾರವ ಗಮನಕ್ಕೆ ಬಂದಿದೆಯೇ?*

ಆ) *ಮೇಲ್ಕಂಡ ಶಾಲೆಗಳಲ್ಲಿ ವಿದ್ಯಾರ್ಥಿಗಳು ಮುಷ್ಕರ ಹೂಡಿದ್ದರೂ ಕೂಡ ಇಲ್ಲಿಯವರೆವಿಗೂ ಪ್ರಯೋಜನವಾಗದಿರುವುದಕ್ಕೆ ಕಾರಣಗಳೇನು? ಸರ್ಕಾರ ಇದರ ಬಗ್ಗೆ ಯಾವ ಕ್ರಮ ಕೈಗೊಂಡಿದೆ?*

ಇ) *ಮೇಲ್ಕಂಡ ಪ್ರಾಥಮಿಕ ಶಾಲೆ, ಹೈಸ್ಕೂಲ್ ಮತ್ತು ಕಾಲೇಜುಗಳಲ್ಲಿರುವ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲೂ ಸರ್ಕಾರದವರು ಕೈಗೊಂಡಿರವ ಕ್ರಮವೇನು?*

ಈ) *ಚಿತ್ತಾಪುರ ತಾಲ್ಲೂಕಿನ ಪ್ರಾಥಮಿಕ ಶಾಲೆ ಹೈಸ್ಕೂಲ್ ಮತ್ತು ಕಾಲೇಜುಗಳಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು?*

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ಸಚಿವರು):

ಅ) ಬಂದಿದೆ.

ಆ) ವಿದ್ಯಾರ್ಥಿಗಳು ಮುಷ್ಕರ ಹೂಡಿದ್ದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಇ) ಪ್ರೌಢ ಶಾಲೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಅರ್ಹ ಪ್ರಾಥಮಿಕ ಶಾಲಾ ಶಿಕ್ಷಕರಿಂದ ಹಾಗೂ ಮಿತವೇತನ ಪದವೀಧರರಿಂದ ತುಂಬಲು ಕ್ರಮ ಕೈಗೊಳ್ಳಲಾಗುತ್ತಿದೆ. ಇನ್ನುಳಿದ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿನ ಖಾಲಿ ಹುದ್ದೆಗಳನ್ನು ವೃಂದ ಮತ್ತು ನೇಮಕಾತಿ ನಿಯಮಗಳು ರಚನೆಯ ನಂತರ ಹಾಗೂ ಆರ್ಥಿಕ ಮಿತವ್ಯಯ ಸಡಿಲಿಸಿದ ನಂತರ ತುಂಬಲು ಕ್ರಮ ಕೈಗೊಳ್ಳಲಾಗುವುದು. ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಅರ್ಹ ಪ್ರೌಢ ಶಾಲಾ ಶಿಕ್ಷಕರಿಗೆ ಬಡ್ತಿ ನೀಡುವ ಮೂಲಕ ತುಂಬಲಾಗುವುದು.

ಈ)

ಪ್ರಾಥಮಿಕ ಶಾಲೆ	-19
ಪ್ರೌಢಶಾಲೆ	-22
ಸಂಯುಕ್ತ ಪದವಿ ಪೂರ್ವ ಕಾಲೇಜು	-7
ಸ್ವತಂತ್ರ ಪದವಿ ಪೂರ್ವ ಕಾಲೇಜು	-4
ಒಟ್ಟು	52

ಶ್ರೀ ಬಾಬುರಾವ್ ಚಿಂಚನ್‌ಸೂರ : ಮಾನ್ಯ ಅಧ್ಯಕ್ಷರೆ, ಚಿತ್ತಾಪುರ ತಾಲ್ಲೂಕಿನ ಪ್ರಾಥಮಿಕ ಶಾಲೆಗಳಲ್ಲಿ ಉಪನ್ಯಾಸಕರಿಲ್ಲದೇ ಇರುವುದರಿಂದ ವಿದ್ಯಾರ್ಥಗಳು ಹಂಗರ್ ಸ್ಟ್ರೈಕ್ ಕುಳಿತಿದ್ದಾಗ ಸರ್ಕಾರದವರು ಏನು ಕ್ರಮ ತೆಗೆದುಕೊಂಡಿದ್ದಾರೆಂದು ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಶಿಕ್ಷಣ ಸಚಿವರ ಪರವಾಗಿ) : ಅಧ್ಯಕ್ಷರೆ, ಚಿತಾಪುರ ತಾಲ್ಲೂಕಿನಲ್ಲಿ ಪ್ರಾಥಮಿಕ ಶಾಲೆ, ಪ್ರೌಸ್ಕೂಲು ಮತ್ತು ಕಾಲೇಜುಗಳಲ್ಲಿ ಉಪನ್ಯಾಸಕರು ಸಾಕಷ್ಟು ಸಂಖ್ಯೆಯಲ್ಲಿ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಆದರೆ ವಿದ್ಯಾರ್ಥಿಗಳು ಹಂಗರ್ ಸ್ಟ್ರೈಕ್ ಮಾಡುತ್ತಿರತಕ್ಕಂಥ ವರದಿ ಸರ್ಕಾರಕ್ಕಂತೂ ಬಂದಿಲ್ಲ. ಅಲ್ಲಿ ಸುಮಾರು 52 ಹುದ್ದೆಗಳು ಖಾಲಿ ಇವೆ. ಈ ಹುದ್ದೆಗಳನ್ನು ಭರ್ತಿ ಮಾಡತಕ್ಕಂಥಾದ್ದಕ್ಕೆ ಸರ್ಕಾರ ಕ್ರಮ ಕೈಗೊಂಡಿದೆ. ಶೀಘ್ರದಲ್ಲೇ ನೇಮಕಾತಿಯಾದನಂತರ ಆ ಜಾಗಗಳನ್ನು ಭರ್ತಿ ಮಾಡಿ ಶಾಲಾ ಮತ್ತು ಕಾಲೇಜುಗಳು ವ್ಯವಸ್ಥಿತವಾಗಿ ನಡೆಯುವಂಥ ರೀತಿಯಲ್ಲಿ ಮಾಡಲಾಗುವುದು.

ಶ್ರೀ ಎಸ್. ಆರ್. ಮೋರೆ : ಮಾನ್ಯ ಅಧ್ಯಕ್ಷರೇ, ಪ್ರಶ್ನೆ ಸಂಖ್ಯೆ 602 (3289)ಕ್ಕೆ ಇದಕ್ಕೆ ಸ್ವಲ್ಪ ಟೈಮ್ ಬೇಕು.

ಶ್ರೀ ಬಿ. ಎಸ್. ಯಡಿಯೂರಪ್ಪ : ಅಧ್ಯಕ್ಷರೆ, ಇಲ್ಲಿ ನನ್ನದೇನೂ ಇಲ್ಲ. ತಾವು ಸಾಧ್ಯವಾದರೆ ನಾಳೆ, ನಾಡಿದ್ದು ಹಾಕಿಕೊಂಡರೆ ತುಂಬಾ ಒಳ್ಳೆಯದಾಗುತ್ತದೆ. ನಾನು ಕೇಳಿದ್ದು ಏನೆಂದರೆ, ಪ್ರಧಾನಿಯವರಿಗೆ, ರೈತರ ಸಾಲ ಮನ್ನಾ ಬಗ್ಗೆ ಪತ್ರ ಬರೆದಿದ್ದಕ್ಕೆ ಉತ್ತರ ಬಂದಿದೆಯೇ? ಬೇರೆ ಬೇರೆ ರಾಜ್ಯದಲ್ಲಿ ಈ ಒಂದು ಕಂಡೀಷನ್ ತೆಗೆದುಹಾಕಿ ಸಾಲ ಮನ್ನಾ ಮಾಡಿದ್ದಾರೆ. ಆದರ ವಿವರವನ್ನು ಒದಗಿಸಿಕೊಟ್ಟು ಅದರಂತೆ ನಮ್ಮ ಸರ್ಕಾರ ಮಾಡಬಹುದೆಂದು ಕೇಳುತ್ತಿದ್ದೇನೆ. ಇದು ಮೂರನೆಯದೋ, ನಾಲ್ಕನೆಯದೋ ಪ.ಪ. ಈ ಸದನ ಪ್ರಾರಂಭವಾದಾಗಿನಿಂದ ನನ್ನ ಮೂರು ಪ್ರಶ್ನೆಗೆ

ಉತ್ತರ ಸಿಗಲಿಲ್ಲ, ಒಂದೇ ಒಂದು ಪ್ರಶ್ನೆಗೆ ಉತ್ತರ ಸಿಕ್ಕಿರುವುದು. ಬೇರೆ ಏನೋ ಹುಡುಕುವಂಥಾದ್ದು ಏನಿಲ್ಲ.

ಶ್ರೀ ಎಸ್.ಆರ್. ಮೋರೆ : ನಾವು ಟೈಮ್ ಕೇಳಿದ್ದೇವೆ.

ಅಧ್ಯಕ್ಷರು : ಎಷ್ಟು ದಿವಸ ಟೈಮ್ ಕೇಳಿದ್ದೀರಿ?

ಶ್ರೀ ಎಸ್. ಆರ್. ಮೋರೆ : 20 ದಿವಸ ಟೈಮ್ ಕೇಳಿದ್ದೇವೆ.

ಅಧ್ಯಕ್ಷರು : 20 ದಿವಸ ಟೈಮ್ ಕೇಳಿದ್ದೀರಾ?

ಶ್ರೀ ಎಸ್. ಆರ್. ಮೋರೆ : ನಾವು ವಿವರ ಕೊಡಬೇಕಾಗುತ್ತದೆ. ಅವಸರದಲ್ಲಿ ಸುಮ್ಮನೇ ಹೇಳುವುದಕ್ಕೆ ಬರುವುದಿಲ್ಲ.

ಅಧ್ಯಕ್ಷರು : ಪ್ರಶ್ನೆ ಇರುವುದು ಮಾನ್ಯ ಮುಖ್ಯಮಂತ್ರಿಗಳು ಮಾನ್ಯ ಪ್ರಧಾನ ಮಂತ್ರಿಯವರಿಗೆ ಪತ್ರ ಬರೆದಿದ್ದಾರೆಯೇ, ಉತ್ತರ ಬಂದಿದೆಯೇ ಎಂದು ಕೇಳುತ್ತಿದ್ದಾರೆ.

ಶ್ರೀ ಎಸ್. ಆರ್. ಮೋರೆ : ಅದು ದೆಹಲಿಯಿಂದ ಬರಬೇಕು.

ಅಧ್ಯಕ್ಷರು : ನಿಮ್ಮ ಸೆಕ್ರಟರಿಯೇಟ್ ಫೈಲ್ ನೋಡಿದರೆ ನಿಮಗೆ ಗೊತ್ತಾಗುತ್ತದೆ. ಉತ್ತರ ಬಂದಿದ್ದರೆ ಬಂದಿದೆ ಇಂತಹ ತಾರೀಖಿಗೆ ಎಂದು ಹೇಳಿ. ಬಂದಿಲ್ಲದಿದ್ದರೆ ಬಂದಿಲ್ಲ ಎಂದು ಹೇಳಿ. ನಾನು ಈ ಪ್ರಶ್ನೆಯನ್ನು 27ನೇ ತಾರೀಖಿಗೆ ಹಾಕುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ತಾವು 27ನೇ ತಾರೀಖಿಗೆ ತೆಗೆದುಕೊಳ್ಳಿ. ಪರವಾಗಿಲ್ಲ. ಈಗ ಏನು ಆಯಿತು. ಮಧ್ಯ ಪ್ರದೇಶದಲ್ಲಿ ಲೋನ್ ವ್ಯವಹಾರದ ಬಗ್ಗೆ ಎಲ್ಲಾ ಕಂಡೀಷನ್ ತೆಗೆದುಹಾಕಿ ಸಾಲ ಮನ್ನಾ ಆಗಿದೆ ಎಂದು ನಾನು ಹೇಳಿದ್ದೆ. ಮಧ್ಯ ಪ್ರದೇಶದಲ್ಲಿ ಆ ಕಂಡೀಷನ್ ತೆಗೆದುಹಾಕಿ ಸಾಲ ಮನ್ನಾ ಮಾಡಿಲ್ಲ ಎಂದು ಪತ್ರಿಕೆಯಲ್ಲಿ ಬಂದಿದೆ. ನಾನು ನೇರವಾದ ಪ್ರಶ್ನೆ ಕೇಳಿದ್ದೆ. ಏಕೆಂದರೆ ಸರ್ಕಾರ ಅಧಿಕೃತವಾಗಿ ಉತ್ತರ ಕೊಡಬೇಕಾಗಿತ್ತು.

(ಗೊಂದಲ)

ಅಧ್ಯಕ್ಷರು : 27ನೇ ತಾರೀಖು ನಿಮ್ಮ ಪ್ರಶ್ನೆ ಬರುತ್ತದೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ಎಲ್ಲಾ ಪತ್ರಿಕೆಯಲ್ಲಿ ಬಂದಿದೆ. ಮಧ್ಯಪ್ರದೇಶದಲ್ಲಿ ಲೋನ್ ವ್ಯವಹಾರದ ಬಗ್ಗೆ ಇಂಪ್ಲಿಮೆಂಟ್ ಮಾಡಿಲ್ಲ ಎಂದು. ಇವತ್ತು ಸರ್ಕಾರ ಅಧಿಕೃತವಾಗಿ ಹೇಳಲಿ. ಆ ಕಂಡೀಷನ್ ತೆಗೆದುಹಾಕಿ ರೈತರ ಸಾಲ ಮನ್ನಾ ಮಾಡಿದೆಯೇ ಅಥವಾ ಇಲ್ಲ ಎಂದು.

ಅಧ್ಯಕ್ಷರು : ಶ್ರೀನಿವಾಸಯ್ಯರವರೆ, ನಿಮ್ಮ ಪ್ರಶ್ನೆ 27ನೇ ತಾರೀಖಿಗೆ ಬರುತ್ತದೆ.

ಶ್ರೀ ಮಾಟಾಳ್ ನಾಗರಾಜ್ : ಅವರು ಇರುವುದರಿಂದ...

ತುಮಕೂರಿನ ಅಂತರಸನ ಹಳ್ಳಿಗೆ M.V.E.S. ವಿದ್ಯುತ್ ಕೇಂದ್ರ.

3431 - ಶ್ರೀ ಎಸ್. ಷಫಿ ಅಹಮದ್ (ತುಮಕೂರು): ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರಿನ ಅಂತರಸನಹಳ್ಳಿ ಎಂ. ವಿ. ಇ. ಎಸ್. ಕೇಂದ್ರವನ್ನು ಸ್ಥಾಪಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಆ) ಈ ಕೆಲಸದ ಪ್ರಗತಿಯು ಯಾವ ಹಂತದಲ್ಲಿದೆ?

ಇ) ತುಮಕೂರು ಜಿಲ್ಲೆಯ ವಿದ್ಯುದ್ಬಲವನ್ನು ಉತ್ತಮಗೊಳಿಸಲು ಇಲಾಖೆಯು ಯಾವ ಕ್ರಮಗಳನ್ನು ತೆಗೆದುಕೊಂಡಿದೆ?